ಸಂಖ್ಯೆ:ಅನುಮತಿ-65/ಡಿಸಿಪಿ/ಸಂ.ಪ/2023

ಉಪ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ಪಶ್ಚಿಮ ವಿಭಾಗ
ಬೆಂಗಳೂರು ನಗರ, ದಿ:23 -03-2023.

# ನಿರಾಕ್ಷೇಪಣಾ ಪತ್ರ

| | | |
|---|---|---|
| 1 | ಅರ್ಜಿದಾರರ ಹೆಸರು ಮತ್ತು ವಿಳಾಸ. | **ಶ್ರೀ ವೀರಯ್ಯ ಹಿರೇಮಠ,** ಸಮಾಜ ಸೇವಕರು, ಬರಹಗಾರ, ಮ್ಯಾರಥಾನ್‌ಗಳ ಕ್ರೀಡಾ ಪಟು, ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್, ನಾಯಂಡಹಳ್ಳಿ, ಬೆಂಗಳೂರು. |
| 2 | ಅರ್ಜಿ ಸ್ವೀಕರಿಸಿದ ದಿನಾಂಕ. | 15.03.2023. |
| 3 | ಯಾವ ಉದ್ದೇಶಕ್ಕಾಗಿ. | **10 ಕಿ.ಮೀ ಓಟದ ಸ್ಪರ್ಧೆ** |
| 4 | ಸರಹದ್ದು | **ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ.** ನಾಯಂಡಹಳ್ಳಿ ಇಂದಿರಾ ಕ್ಯಾಂಟಿನ್ ನಿಂದ, ನಾಗರಬಾವಿ ಸರ್ಕಲ್, ಜ್ಞಾನಭಾರತಿ ರಸ್ತೆ, ಆರ್.ಆರ್. ಆರ್ಚ್, ನಾಯಂಡಹಳ್ಳೀ, ನಾಗರಬಾವಿ ಔಟರ್ ರಿಂಗ್ ರಸ್ತೆ ಮೂಲಕ ನಾಯಂಡಹಳ್ಳಿ ಇಂದಿರಾ ಕ್ಯಾಂಟಿನ್<br><br>**ಕೆಂಗೇರಿ ಸಂಚಾರ ಪೊಲೀಸ್ ಠಾಣೆ** ಗಾಂಧಿಮಾರ್ಗ ರಸ್ತೆಯ ಬಳಿ ವೃಷಭಾವತಿಯ ಮೋರಿಯಿಂದ ಮೈಸೂರು ರಸ್ತೆಯ ಜ್ಞಾನಭಾರತಿ ಜಂಕ್ಷನ್‌ವರೆಗೂ (ಗಾಂಧಿಭವನ, ಮುಖ್ಯ ಕಛೇರಿ, ಯೂನಿವರ್ಸಿಟಿ ಲೈಬ್ರರಿ ಜಂಕ್ಷನ್, ಲೇಡಿಸ್ ಹಾಸ್ಟೆಲ್ ಜಂಕ್ಷನ್) |
| 5 | ಪರವಾನಿಗೆಯ ಅವಧಿ ಮತ್ತು ವೇಳೆ | 11.06.2023 ರಂದು ಬೆಳಗ್ಗೆ 5.30 ರಿಂದ 08.30 ಗಂಟೆ ವರೆಗೆ |
| 6 | ಭಾಗವಹಿಸುವವರ ಸಂಖ್ಯೆ | 5000 ಜನರು |

**ನಿಬಂಧನೆಗಳು:-**

1. ಯಾವುದೇ ಕಾರಣಕ್ಕೂ ರಸ್ತೆಯ ಸಂಚಾರವನ್ನು ಮುಕ್ತವಾಗಿ ಮಾಡಲು ಸಾಧ್ಯವಿಲ್ಲ.
2. ಇತರೆ ವಾಹನಗಳ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ನೋಡಿಕೊಳ್ಳುವುದು.
3. **ಕಾರ್ಯಕ್ರದಲ್ಲಿ ಎಲ್ಲಾ ರೀತಿಯ ಮುಂಜಾಗ್ರತ ಕ್ರಮಗಳನ್ನು ಪಾಲಿಸುವುದು ಮತ್ತು ಆಯೋಜಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಸೇವಕರನ್ನು ನಿಯೋಜಿಸಿಕೊಳ್ಳುವುದು.**
4. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ರಸ್ತೆ ಎಡಭಾಗದಲ್ಲಿ ಸಂಚರಿಸುವುದು & **ಕೊವಿಡ್-19ಗೆ ಸಂಬಂಧಿಸಿದಂತೆ ಎಲ್ಲಾ ಮುನ್ನೇಚರಿಕೆ ಕ್ರಮಗಳನ್ನು ಪಾಲಿಸುವುದು.**
5. ಕಾರ್ಯಕ್ರಮದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳುವುದು. ಯಾವುದೇ ಕ್ರಿಮಿನಲ್/ಸಿವಿಲ್ ದಾವೆಗಳು ಈ ಸಂಬಂಧ ದಾಖಲಾದಲ್ಲಿ, ಆಯೋಜಕರು ನೇರವಾಗಿ ಹೊಣೆಯನ್ನು ಹೊರಬೇಕಾಗುತ್ತದೆ.
6. ದೈನಂದಿನ ವಾಹನಗಳ ಸಂಚಾರಕ್ಕೆ ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗದಂತೆ ಸೂಕ್ತ ಸುರಕ್ಷಿತ ಕ್ರಮಗಳನ್ನು ಕೈಗೊಂಡು ಕಾರ್ಯಕ್ರಮಗಳನ್ನು ನಡೆಸುವುದು.

ಉಪ ಪೊಲೀಸ್ ಆಯುಕ್ತರವರ ಕಛೇರಿ ಬೆಂಗಳೂರು ನಗರ ಸಂಚಾರ, ಪಶ್ಚಿಮ ವಿಭಾಗ

7. ಸರ್ಕಾರಿ/ಖಾಸಗಿ ಸ್ವತ್ತುಗಳು ಜಖಂಗೊಂಡಲ್ಲಿ ಆಯೋಜಕರೇ ಅವರ ಸ್ವಂತ ಖರ್ಚಿನಿಂದ ದುರಸ್ತಿಗೊಳಿಸತಕ್ಕದ್ದು.
8. ಕಾರ್ಯಕ್ರಮವನ್ನು ನಿಗದಿತ ಸ್ಥಳದಲ್ಲಿ ಮಾತ್ರ ಹಮ್ಮಿಕೊಳ್ಳುವಂತೆ ನೋಡಿಕೊಳ್ಳಲು ಆಯೋಜಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರು ಇಲ್ಲವೇ ಸೆಕ್ಯೂರಿಟಿ ಗಾರ್ಡಗಳನ್ನು ನೇಮಿಸಿಕೊಳ್ಳುವುದು.
9. **ಕಾರ್ಯಕ್ರಮ ಪ್ರಾರಂಭಕ್ಕೂ ಮುನ್ನ ಸ್ಥಳೀಯ ಸಂಚಾರ ಪೊಲೀಸರ ಸಹಕಾರವನ್ನು ಪಡೆದು ಅವರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.**
10. ಸಂಚಾರಿ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು & ಯಾವುದೇ ಸಮಸ್ಯೆಯಿಂದ ಸಂಚಾರ ಸ್ಥಗಿತಗೊಂಡಲ್ಲಿ ಕೂಡಲೆ ಸ್ಥಳೀಯ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ವಿಷಯವನ್ನು ತಿಳಿಸುವುದು.
11. ನಿರಪೇಕ್ಷಣಾ ಪತ್ರವನ್ನು ಮೇಲ್ಕಂಡ ದಿನಾಂಕ, ಸಮಯ, ನಮೂದಿತ ಸ್ಥಳ ಹಾಗೂ ನಿಗದಿತ ಉದ್ದೇಶಕ್ಕಾಗಿ ನೀಡಲಾಗಿದೆ.
12. ರಸ್ತೆ ಮಧ್ಯದಲ್ಲಿ ಸಿಡಿಮದ್ದುಗಳನ್ನು / ಪಟಾಕಿಗಳನ್ನು ಸಿಡಿಸುತ್ತಾ ಸಾರ್ವಜನಿಕರ ಓಡಾಟಕ್ಕೆ /ವಾಹನಗಳ ಸಂಚಾರಕ್ಕೆ ಅಡಚಣೆಯುಂಟು ಮಾಡಬಾರದು.
13. ಮೇಲ್ಕಂಡ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ನಿರಾಪೇಕ್ಷಣಾ ಪತ್ರವನ್ನು ರದ್ದುಗೊಳಿಸುವ ನಿಬಂಧನೆಗಳ ಮೇಲೆ ಅನುಮತಿ ನೀಡಲಾಗಿದೆ. ನಿರಪೇಕ್ಷಣಾ ಪತ್ರವನ್ನು ಪೊಲೀಸರು ಕೇಳಿದಲ್ಲಿ ಹಾಜರುಪಡಿಸುವುದು.

ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಿರುವ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಬಂದೋಬಸ್ತ್ ವೆಚ್ಚ ರೂ. 32,615/– ಗಳನ್ನು ಅರ್ಜಿದಾರರು ಸರ್ಕಾರಕ್ಕೆ ಭರಿಸಿರುತ್ತಾರೆ. (SBI Bank <u>Voucher No. J-249195961</u> Dt. 21.03.2023)

**ಉಪ ಪೊಲೀಸ್ ಆಯುಕ್ತರು,**
ಸಂಚಾರ ಪಶ್ಚಿಮ ವಿಭಾಗ
ಬೆಂಗಳೂರು ನಗರ

**ಗೆ,**

**ಶ್ರೀ ವೀರಯ್ಯ ಹಿರೇಮಠ,**
ಸಮಾಜ ಸೇವಕರು, ಬರಹಗಾರ,
ಮ್ಯಾರಥಾನ್‌ಗಳ ಕ್ರೀಡಾ ಪಟು,
ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್,
ನಾಯಂಡಹಳ್ಳಿ, ಬೆಂಗಳೂರು.

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>**
1. ಪೊಲೀಸ್ ಇನ್ಸ್‌ಪೆಕ್ಟರ್, ಬ್ಯಾಟರಾಯನಪುರ ಮತ್ತು ಕೆಂಗೇರಿ ಸಂಚಾರ ಪೊಲೀಸ್ ಠಾಣೆ, ಬೆಂ.ನಗರ
2. ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಪಶ್ಚಿಮ ಉಪ ವಿಭಾಗ, ಬೆಂ.ನಗರ.

<u>ಪ್ರತಿಯನ್ನು ವಂದನೆಗಳೊಂದಿಗೆ ಮಾಹಿತಿಗಾಗಿ.</u>

1. ಮಾನ್ಯ ವಿಶೇಷ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ.
2. ಮಾನ್ಯ ಜಂಟಿ ಪೊಲೀಸ್ ಆಯುಕ್ತರ, ಸಂಚಾರ, ಬೆಂಗಳೂರು ನಗರ.

**ಕರ್ನಾಟಕ ರಾಜ್ಯ ಸರ್ಕಾರ**
**ಪೊಲೀಸ್ ಇಲಾಖೆ**

**ಪ್ರಕಟಣೆ ಸಂಖ್ಯೆ ಬಿ.ಸಿ.ಪಿ.ಎಂ.ಎಚ್:1:2009 ದಿನಾಂಕ 20ನೇ ಮೇ 2009**
**ಸಭೆ ಹಾಗೂ ಮೆರವಣಿಗೆಗಳಿಗೆ ಅನುಮತಿ ಹಾಗೂ ನಮೂನೆ-111 ಮೆರವಣಿಗೆಗಳನ್ನು ನಡೆಸಲು ಅನುಮತಿ ಪತ್ರ**
**ಸಂಖ್ಯೆ/ಡಿಸಿಪಿ(ಪ)/ಮೆರವಣಿಗೆ/ಅನುಮತಿ ಪತ್ರ/ /2023**

| | | |
|---|---|---|
| 1 | ಸಂಘಟಕರ ಹೆಸರು | ಶ್ರೀ ವಿರಯ್ಯ ಹಿರೇಮಠ್ |
| 2 | ಪದನಾಮ, ವಿಳಾಸ, ಹಾಗೂ ಸಂಪರ್ಕಿಸಬೇಕಾದ ದೂರವಣಿ | ನಂ-26, ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್, ನಾಯಂಡಹಳ್ಳಿ ವಾರ್ಡ್, ಬೆಂಗಳೂರು-26. ಮೊ: 9448387950 |
| 3 | ಉದ್ದೇಶ | ಉತ್ತಮ ಆರೋಗ್ಯಕ್ಕಾಗಿ 10 ಕಿ.ಮೀ ಓಟದ ಸ್ಪರ್ಧೆ. |
| 4 | ಮ್ಯಾರಾಥಾನ್ ಪ್ರಾರಂಭದ ಸಮಯ ಮತ್ತು ಮುಕ್ತಾಯಗೊಳ್ಳುವ ಸಮಯ | ದಿ: 11-06-2023 ರಂದು ಬೆಳಗ್ಗೆ 5-30 ಗಂಟೆಯಿಂದ 08-30 ಗಂಟೆವರೆಗೆ. |
| 5 | ಭಾಗವಹಿಸಲು ಅನುಮತಿ ನೀಡಿದ ಜನರ ಸಂಖ್ಯೆ | ಸುಮಾರು 2000-3000 ಜನರು |
| 6 | ಯಾವ ಮಾರ್ಗಗಳಲ್ಲಿ ಮ್ಯಾರಥಾನ್ ನಡೆಸಲು ಅನುಮತಿ ನೀಡಲಾಗಿದೆ. | ಕೆಂಗೇರಿ & ಕೆಂಗೇರಿಗೇಟ್ ಉಪವಿಭಾಗ ವ್ಯಾಪ್ತಿಗಳಲ್ಲಿ. |
| 8 | ಭಾಗವಹಿಸಲು ಅನುಮತಿ ನೀಡಿದ ವಾಹನಗಳ ಸಂಖ್ಯೆ ಹಾಗೂ ವಾಹನಗಳ ಮಾದರಿ | ಕಾಲ್ನಡಿಗೆಯಲ್ಲಿ |
| 9 | ಧ್ವನಿವರ್ಧಕ ಬಳಕೆ | **ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ ನಂ.ಎಫ್.ಇ.ಇ/128/ಇ.ಪಿ.ಸಿ-2022 ದಿನಾಂಕ:10.05.2022 ಹಾಗೂ ಮಾನ್ಯ ನ್ಯಾಯಲಯದ ಆದೇಶದ ಅನ್ವಯ ನಿಯಮಿತ ಶಬ್ದ ಇಟ್ಟುಕೊಂಡು ಧ್ವನಿವರ್ಧಕವನ್ನು ಬಳಸಬಹುದು** |
| 10 | ಸಮರ್ಪಕವಾಗಿ ನಡೆಸಲು ನಿಯೋಜಿತ ಅಧಿಕಾರಿಗಳ ಹೆಸರು ಹಾಗೂ ಪದನಾಮ | 1) ಸಹಾಯಕ ಪೊಲೀಸ್ ಆಯುಕ್ತರು, ಕೆಂಗೇರಿ ಗೇಟ್ & ಕೆಂಗೇರಿ ಉಪ ವಿಭಾಗ,<br>2) ಕೆಂಗೇರಿ ಗೇಟ್ & ಕೆಂಗೇರಿ ಉಪವಿಭಾಗದ ಎಲ್ಲಾ ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳಿಗೆ |

**<u>ನಿಬಂಧನೆಗಳು :-</u>**

1) ಮ್ಯಾರಥಾನ್ ಸಮಯದಲ್ಲಿ ಯಾವುದೇ ಧಾರ್ಮಿಕ ರಾಜಕೀಯ, ಸಾಮಾಜಿಕ ಭಾಷಾವಾರು ಅಥವಾ ಸಾಂಸ್ಕೃತಿಕ ಗುಂಪುಗಳನ್ನು ಕೆರಳಿಸುವ ಘೋಷಣೆ ಇತ್ಯಾದಿಗಳನ್ನು ಕೂಗಬಾರದು.
2) ಸಂಘಟಕರು ಅನುಮತಿ ನೀಡಲಾದ ವೇಳೆಗೆ ಬದ್ಧವಾಗಿರತಕ್ಕದ್ದು. **ನಿಷೇಧಾಜ್ಞೆ ಜಾರಿಯಲ್ಲಿದ್ದಾಗ ಈ ಅನುಮತಿಯು ರದ್ದಾಗುತ್ತದೆ.**
3) ಸಂಘಟಕರು ಮ್ಯಾರಥಾನ್‌ನ್ನು ಸುವ್ಯವಸ್ಥೆ ರೀತಿಯಲ್ಲಿ ನಡೆಸಿಕೊಂಡು ಹೋಗುವುದು. ಹಾಗೂ ಜವಾಬ್ದಾರಿಯುತ ಸದಸ್ಯರು ಮ್ಯಾರಥಾನ್ ನಲ್ಲಿ ಭಾಗವಹಿಸಿ ಸುವ್ಯವಸ್ಥೆಯನ್ನು ನೋಡಿಕೊಳ್ಳಬೇಕು.
4) ಮ್ಯಾರಥಾನ್ ನ್ನು ಅನುಮತಿ ನೀಡಿರುವ ಮಾರ್ಗಗಳಲ್ಲಿ ಮಾತ್ರ ನಡೆಸಬೇಕು. ರಸ್ತೆಯ ಎಡಬದಿಯಲ್ಲಿ ಚಲಿಸಬೇಕು
5) ರಸ್ತೆ ಬಂದ್ ಮಾಡಬಾರದು, ವಾಹನಗಳ ಸಂಚಾರಕ್ಕೆ ಅಡಚಣೆ ಉಂಟು ಮಾಡಬಾರದು & ಸಂಚಾರ ವಿಭಾಗದಿಂದ ಪ್ರತ್ಯೇಕ ಅನುಮತಿ ಪಡೆಯತಕ್ಕದ್ದು.
6) ಮ್ಯಾರಥಾನ್ ಸಮಯದಲ್ಲಿ ಪಟಾಕಿ ಹಚ್ಚುವುದು, ಯಾವುದೇ ವಸ್ತುಗಳನ್ನು ಸುಟ್ಟುಹಾಕುವುದನ್ನು ಮಾಡಬಾರದು
7) ಮ್ಯಾರಥಾನ್ ಸಮಯದಲ್ಲಿ ಮಾರಕಾಸ್ತ್ರಗಳನ್ನು ಹೊಂದಿರಬಾರದು.
8) ಮ್ಯಾರಥಾನ್ ಸಮಯದಲ್ಲಿ ಕರ್ತವ್ಯ ನಿರತ ಪೊಲೀಸರು ಸಾರ್ವಜನಿಕರ ಹಿತದೃಷ್ಟಿ ಹಾಗೂ ವಾಹನ ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು.
9) ಮ್ಯಾರಥಾನ್ ಸಮಯದಲ್ಲಿ ಗಲಭೆಯಲ್ಲಿ ತೊಡಗಿ ಸಾರ್ವಜನಿಕರ ಆಸ್ತಿಪಾಸ್ತಿ, ಜೀವ ಹಾನಿ ಮಾಡಬಾರದು. ಮಾಡಿದವರ ಮೇಲೆ ಕಾನೂನು ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಮೆರವಣಿಗೆಯನ್ನು ಶಾಂತಿಯುತವಾಗಿ ನಡೆಸತಕ್ಕದ್ದು.
10) **ಮ್ಯಾರಥಾನ್‌ನಲ್ಲಿ ಬಾಗಿಯಾಗುವವರು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ158 ಟಿ.ಎನ್.ಆರ್ 2020 ದಿ:03-12-2021 ರ ರನ್ವಯ ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಮತ್ತು ಸಾಮಾಜಿಕ ಅಂತರ ಕಾಪಾಡಬೇಕು. ಈ ನಿಯಮವನ್ನು ಉಲ್ಲಂಘಿಸಿದಲ್ಲಿ ಎನ್.ಡಿ.ಎಮ್.ಎ ಕಾಯ್ದೆ ಅಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.**
11) **ಈ ಅದೇಶದ ಯಾವುದೇ ನಿಬಂಧನೆಗಳು ಅಥವ ಲೈಸೆನ್ಸ್‌ನಲ್ಲಿ ನಮೂದಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆ 1963 ಕಲಂ 103 ಇತರೆ ಸಂಬಂಧಪಟ್ಟ ಕಾನೂನು ಅಡಿಯಲ್ಲಿ ಸಂಘಟಗರನ್ನು ಅಭಿಯೋಗಗೊಳಿಸಲಾಗುವುದು.**

ದಿನಾಂಕ :-15-04-2023

ಉಪ ಪೊಲೀಸ್ ಆಯುಕ್ತರು
ಪಶ್ಚಿಮ ವಿಭಾಗ ಬೆಂಗಳೂರು ನಗರ

# RajaRajeswari Medical College & Hospital

**Recognised by National Medical Commission (NMC) & Govt. of India**

A Constituent Institution of Dr.M.G.R. Educational and Research Institute,

(Deemed to be University)

MHRD G.O No. F10/4/2018-u.3(A) Dt:14.02.2019

UNIVERSITY WITH GRADED AUTONOMY STATUS

IAO NABH NAAC 'A' Accredited NABL ISO 9001-2015 HLACT

Date: 5/4/2023

To,
Mr. Veeraiah Hiremath,
Social Worker, Marathon Sportsman
#26, Near SAI Road Compound,
Vinayaka Layout, Nayandahalli,
Bangalore-560026

Sir,

Ref your letter dated 28/3/2023

This is to inform you that as requested by you we have accepted to provide Medical Emergency support for the Road race on 11/6/2023 Sunday morning with one Ambulance, Doctors, Nursing Staff and Few Medicine (Paracetamol, Analgesics, Multivitamins) upto end of your programme 6PM.

**MEDICAL SUPERINTENDENT**

Medical Superintendent
RAJARAJESWARI MEDICAL COLLEGE & HOSPITAL
Kambipura, Mysore Road,
Kengeri, Bangalor - 560 074.

ಕರ್ನಾಟಕ ರಾಜ್ಯ ಪೊಲೀಸ್ ಫಾರಂ ನಂ. 298 (6)

ಫಾರಂ

ಕಲಂ.37(1) (2) ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಪ್ರಕಾರ

ಸಭೆ/ಸಮಾರಂಭ/ಮೆರವಣಿಗೆ/ಧ್ವನಿವರ್ಧಕ ಉಪಯೋಗಿಸಲು ನೀಡುವ ಪರವಾನಗಿ ಪತ್ರ

| ಕ್ರಸಂ | ವಿವರ | ಆದೇಶ |
|---|---|---|
| 1 | ಧ್ವನಿವರ್ಧಕ ಪರವಾನಗಿ ನಂ. ದಿನಾಂಕ | ನಂ/ಎಲ್.ಎಸ್/50/ಎಸಿಪಿ-ಕೆಜಿ/2023, ದಿನಾಂಕ:28.03.2023 |
| 2 | ಪರವಾನಗಿ ನೀಡಲಾಗಿರುವ ಅರ್ಜಿದಾರರ ಹೆಸರು ಮತ್ತು ವಿಳಾಸ | ಶ್ರೀ ವೀರಯ್ಯ ಹಿರೇಮಠ, ನಂ. 26, ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್, ನಾಯಂಡಹಳ್ಳಿ, ವಾರ್ಡ್ ನಂ. 155, ಬೆಂಗಳೂರು-560026 ಬೆಂಗಳೂರು ನಗರ. ಮೊ.ನಂ. 9448387950. |
| 3 | ಪರವಾನಗಿ ಉದ್ದೇಶ | 10 ಕಿ.ಮಿ ಓಟದ ಸ್ಪರ್ಧೆ ಕಾರ್ಯಕ್ರಮಕ್ಕೆ ಪ್ರಚಾರ ಮಾಡಲು ಧ್ವನಿವರ್ಧಕ ಬಳಸಲು ಅನುಮತಿ |
| 4 | ಪರವಾನಗಿ ವೇಳೆ | ದಿನಾಂಕ: 04-06-2023 ರಿಂದ 11-06-2023 ರವರೆಗೆ ಬೆಳಿಗ್ಗೆ 06-00 ಗಂಟೆಯಿಂದ ರಾತ್ರಿ 10-00 ಗಂಟೆಯವರೆಗೆ. |
| 5 | ಪ್ರಚಾರ ಮಾಡಲು ಉಪಯೋಗಿಸುವ ವಾಹನ | ಆಟೋ ರಿಕ್ಷಾ ನಂ. ಕೆಎ-05-ಎ.ಎಲ್-5055 |
| 6 | ಪರವಾನಗಿ ನೀಡಿದ ಸ್ಥಳ | ಚಂದ್ರಲೇಔಟ್ ಮತ್ತು ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ |

ನಿಬಂಧನೆಗಳು

**ಕಲಂ.31(ಓ) ಕರ್ನಾಟಕ ಪೊಲೀಸ್ ಕಾಯ್ದೆ ಪ್ರಕಾರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ ಪರವಾನಗಿ ನೀಡಿದೆ.**

1. ಯಾವುದೇ ರೀತಿಯಲ್ಲಿ ಇತರೆಯವರಿಗೆ ಮತ್ತು ಸಂಚಾರಕ್ಕೆ ತೊಂದರೆಯಾಗದಂತೆ ಧ್ವನಿವರ್ಧಕ ಉಪಯೋಗಿಸತಕ್ಕದ್ದು.
2. ನೀಡಿರುವ ಸ್ಥಳದಲ್ಲಿ ಮಾತ್ರ ಧ್ವನಿವರ್ಧಕ ಉಪಯೋಗಿಸುವುದು ಹಾಗೂ ಪರವಾನಿಗಿಯಲ್ಲಿ ನೀಡಿರುವ ವೇಳೆಯವರೆಗೆ ಮಾತ್ರ ಉಪಯೋಗಿಸುವುದು.
3. ಕೋವಿಡ್-19ರ ಸಂಬಂಧ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.
4. ನೀಡಲಾಗಿರುವ ಪರವಾನಿಗಿಯಲ್ಲಿ ನಿಗದಿತ ಸ್ಥಳದಲ್ಲಿ ಮಾತ್ರ ಬಾಕ್ಸ್ ಮಾದರಿಯ ಧ್ವನಿವರ್ಧಕ ಉಪಯೋಗಿಸತಕ್ಕದ್ದು.
5. ಸಾರ್ವಜನಿಕರಿಗೆ ಮತ್ತು ರೋಗಿಗಳಿಗೆ, ಶಾಲಾ ಕಾಲೇಜು ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಧ್ವನಿವರ್ಧಕ ಉಪಯೋಗಿಸತಕ್ಕದ್ದು.
6. ಬಲವಂತವಾಗಿ ಯಾರಿಂದಲೂ ಚಂದಾ ವಸೂಲಿ ಮಾಡಬಾರದು.
7. ಸ್ಥಳೀಯ ಪೊಲೀಸರು ನೀಡುವ ಸೂಚನೆಗಳನ್ನು ತಪ್ಪದೆ ಪಾಲಿಸುವುದು.
8. ಬೆಸ್ಕಾಂನಿಂದ ನಿಯಮಾವಳಿ ಅನ್ವಯ ಕಡ್ಡಾಯವಾಗಿ ಅನುಮತಿ ಪಡೆದು ಕೊಂಡು ವಿದ್ಯುತ್‌ನ್ನು ಬಳಸಲು ಸೂಚಿಸಲಾಗಿದೆ.
9. ಬಿಬಿಎಂಪಿಯಿಂದ ಅನುಮತಿ ಪಡೆದುಕೊಂಡು ಕಾರ್ಯಕ್ರಮವನ್ನು ಮಾಡುವುದು.

**ಈ ಮೇಲ್ಕಂಡ ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆ 109 ಪ್ರಕಾರ 500/-ರೂ. ದಂಡ ಹಾಗೂ 03 ತಿಂಗಳ ಶಿಕ್ಷೆಗೆ ಒಳಪಡಿಸಲಾಗುತ್ತದೆ.**

TB

**ಭರತ್ .ಎಸ್. ರೆಡ್ಡಿ. ಕೆ.ಎಸ್.ಪಿ.ಎಸ್**
**ಸಹಾಯಕ ಪೊಲೀಸ್ ಕಮೀಷನರ್**
**ಕೆಂಗೇರಿಗೇಟ್ ಉಪ ವಿಭಾಗ**
**ಮೈಸೂರು ರಸ್ತೆ, ಬೆಂಗಳೂರು ನಗರ-560026**

**ರವರಿಗೆ,**

ಶ್ರೀ ವೀರಯ್ಯ ಹಿರೇಮಠ, ನಂ. 26, ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್, ನಾಯಂಡಹಳ್ಳಿ, ವಾರ್ಡ್ ನಂ. 155, ಬೆಂಗಳೂರು-560026 ಬೆಂಗಳೂರು ನಗರ. ಮೊ.ನಂ. 9448387950.

**ಮಾಹಿತಿಗಾಗಿ ರವರಿಗೆ,**

ಪಿ.ಐ, ಬ್ಯಾಟರಾಯನಪುರ, ಚಂದ್ರಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ನಗರ.

**ಪ್ರತಿಯನ್ನು ಅಭಿನಂದನೆಗಳೊಂದಿಗೆ:-**

ಮಾನ್ಯ ಉಪ ಪೊಲೀಸ್ ಕಮೀಷನರ್, ಪಶ್ಚಿಮ ವಿಭಾಗ, ಬೆಂಗಳೂರು ನಗರ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಚಂದ್ರಾಬಡಾವಣೆ ಉಪ ವಿಭಾಗ, 2ನೇ ಮಹಡಿ, ಶಕ್ತಿಸೌಧ,
13ನೇ ಅಡ್ಡರಸ್ತೆ, 4ನೇ 'ಬಿ' ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು – 560 040.

---

ಸಂಖ್ಯೆ. ಸಕಾನಿಅ/ಚಂಬ/ಪಿಆರ್/ 01 /2023-24, ದಿನಾಂಕ. 12/04/2023

**ಅನುಮತಿ ಪತ್ರ**

ವಿಷಯ:- ಓಟದ ಸ್ಪರ್ಧೆ ಮತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅನುಮತಿ ಕೋರಿರುವ ಬಗ್ಗೆ

ಉಲ್ಲೇಖ:- 1. ಭಾರತ ಚುನಾವಣಾ ಆಯೋಗ ರವರ ಪತ್ರದ ಸಂಖ್ಯೆ:
ಇ.ಸಿ.ಐ/ಪಿ.ಎನ್/24/2023, ದಿನಾಂಕ:29/03/2023.
2. ತಮ್ಮ ಮನವಿಯ ದಿನಾಂಕ: 11-04-2023

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ವೀರಯ್ಯ ಹಿರೇಮಠ, ಸಮಾಜ ಸೇವಕರು, ವಾರ್ಡ್ ನಂ.155, ನಾಯಂಡಹಳ್ಳಿ ರವರು ದಿನಾಂಕ. 11-06-2023 ರಂದು ಬೆಳಿಗ್ಗೆ 5-30 ಗಂಟೆಯಿಂದ ಬೆಳಿಗ್ಗೆ 8-30 ಗಂಟೆವರೆಗೆ ಸುಮಾರು 5000 ಜನರೊಂದಿಗೆ ನಾಯಂಡಹಳ್ಳಿ ಇಂದಿರಾ ಕ್ಯಾಂಟಿನ್‌ನಿಂದ ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಭಾರತಿ ಹಾಗೂ ನಾಯಂಡಹಳ್ಳಿ ಮೆಟ್ರೋ ನಿಲ್ದಾಣ ಮುಖಾಂತರ ಇಂದಿರಾ ಕ್ಯಾಂಟಿನ್ ಬಳಿ 10 ಕಿಲೋ ಮೀಟರ್ ಓಟದ ಸ್ಪರ್ಧೆ ಮತ್ತು ಇನ್ನು ಮುಂತಾದ ಓಟದ ಸ್ಪರ್ಧೆಯನ್ನು ನಡೆಸಲು ನಿರಾಪೇಕ್ಷಣಾ ಪತ್ರ ನೀಡಲು ಕೋರಿರುತ್ತೀರಿ.

ಸದರಿ ಮನವಿಯನ್ನು ಪರಿಶೀಲಿಸಲಾಗಿ ಓಟದ ಸ್ಪರ್ಧೆ ಮತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿಯನ್ನು ನೀಡಲಾಗಿದೆ.

**ಷರತ್ತುಗಳು:-**

1. ಕಾರ್ಯಕ್ರಮ ನಡೆಸುವಾಗ ಪಾದಚಾರಿಗಳಿಗಾಗಲೀ ಅಥವಾ ವಾಹನಗಳ ಸಂಚಾರಕ್ಕಾಗಲೀ ಅಡ್ಡಿಯುಂಟು ಮಾಡಬಾರದು.
2. ಕಾರ್ಯಕ್ರಮದ ವೇಳೆಯಲ್ಲಿ ಬೆಂಕಿ ಮುಂತಾದ ದುರ್ಘಟನೆಗಳ ವಿರುದ್ಧ ಅಗತ್ಯ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಬೆಂಕಿ ಮತ್ತು ದುರ್ಘಟನೆಗಳಿಂದ ಸಾರ್ವಜನಿಕರಿಗಾಗಲೀ ಅಥವಾ ಆಜುಬಾಜಿನ ಸಾರ್ವಜನಿಕ ಸ್ವತ್ತುಗಳಿಗಾಗಲೀ ಹಾನಿ ಮಾಡಿದಲ್ಲಿ ಅರ್ಜಿದಾರನೇ ಸ್ವತಃ ಜವಾಬ್ದಾರರನ್ನಾಗಿ ಪರಿಗಣಿಸಬೇಕಾಗುತ್ತದೆ.
3. ಕಾರ್ಯಕ್ರಮ ನಡೆಸಲು ಸಂಬಂಧಪಟ್ಟ ಆರಕ್ಷಕ ಇಲಾಖೆ / ಸಂಚಾರಿ ಪೊಲೀಸ್ ಠಾಣೆಯಿಂದ ಸೂಕ್ತ ಅನುಮತಿಯನ್ನು ಪಡೆಯಬೇಕು.
4. ಕಂಬಗಳನ್ನು ನಿಲ್ಲಿನಲು ರಸ್ತೆಗಳನ್ನು ಅಗೆಯಕೂಡದು ಮತ್ತು ಕಂಬಗಳನ್ನು ಮತ್ತು ಪಾದಚಾರಿಗಳ ದಾರಿಯ ಮೇಲೆ ಪಾದಚಾರಿಗಳಿಗೆ ಅಡ್ಡಿ ಮಾಡಬಾರದು.
5. ಕಾರ್ಯಕ್ರಮಕ್ಕೆ ಚಪ್ಪರ/ ಶಾಮಿಯಾನವನ್ನು ಹಾಕುವುದಕ್ಕೆ ಮೊದಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಆಕ್ಷೇಪಣಾರಹಿತ ಸರ್ಟಿಫಿಕೇಟ್ ಪಡೆಯಬೇಕು.
6. ಕಾರ್ಯಕ್ರಮಕ್ಕೆ ಅನುಮತಿ ನೀಡಿರುವ ನಮೂನೆ ಮಾಡಿರುವ ದಿನಕ್ಕೆ ಸಮಾರಂಭಗಳ ದಿನಗಳಿಗೆ ಉತ್ಸವ ಇತ್ಯಾದಿ ದಿನಗಳಿಗೆ ಮೊತ್ತ ಮಾನ್ಯವಾಗಿರುತ್ತದೆ. ಅನುಮತಿಯ ಅವಧಿ ಮುಗಿದ ಕೂಡಲೇ ಚಪ್ಪರ/ಶಾಮಿಯಾನವನ್ನು ತೆಗೆದುಹಾಕಬೇಕು.
7. ಒಂದು ವೇಳೆ ಕಾರ್ಯಕ್ರಮವನ್ನು ರದ್ದು ಮಾಡಿದಾಗ ಅಥವಾ ಮುಂದೂಡಿದಾಗ ಈ ಸಂದರ್ಭದಲ್ಲಿ ನೀಡಿರುವ ಅನುಮತಿ ನಿಷ್ಪರಿಣಾಮವಾಗುತ್ತದೆ. ಮತ್ತು ಅರ್ಜಿದಾರನು ಮತ್ತೆ ಏರ್ಪಡಿಸುವ ಕಾರ್ಯಕ್ರಮಕ್ಕೆ ಹೊಸದಾಗಿ ಅನುಮತಿಯನ್ನು ಪಡೆಯಬೇಕು.

ರವರಿಗೆ,
ಶ್ರೀ ವೀರಯ್ಯ ಹಿರೇಮಠ
ಸಮಾಜ ಸೇವಕರು
ನಂ. 26, ವಿನಾಯಕ ಬಡಾವಣೆ, ಸಾಯಿರಸ್ತೆ ಕಾಂಪೌಂಡ್,
ನಾಯಂಡಹಳ್ಳಿ, ಬೆಂಗಳೂರು – 560039.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಚಂದ್ರಾಬಡಾವಣೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೆಂಗಳೂರು ವಿಶ್ವವಿದ್ಯಾಲಯ

*ಸಂಖ್ಯೆ:ಸಾಮಾನ್ಯವಿಭಾಗ/ಮ್ಯಾರಥಾನ್/ಅನುಮತಿ/2022-2023* *ದಿನಾಂಕ: 23.03.2023*

ಗೆ,

ಶ್ರೀ. ವೀರಯ್ಯ ಹಿರೇಮಠ,
ನಂ.26, ಸಾಯಿ ರೋಡ್ ಕಾಂಪೌಂಡ್,
ವಿನಾಯಕ ಲೇಔಟ್, ನಾಗುಂಡಹಳ್ಳಿ,
ವಾರ್ಡ್ ಸಂಖ್ಯೆ:131, ಬೆಂಗಳೂರು-560026.

**ಮಾನ್ಯರೇ,**

**ವಿಷಯ:** ವಿಶ್ವವಿದ್ಯಾಲಯದ ಆವರಣದಲ್ಲಿ ದಿನಾಂಕ: 11.06.2023ರಂದು ಓಟದ ಸ್ಪರ್ಧೆ (ಮ್ಯಾರಥಾನ್)ಗೆ ಅನುಮತಿ ನೀಡುವಂತೆ ಕೋರಿರುವ ಮನವಿಯ ಕುರಿತು.

**ಉಲ್ಲೇಖ:** 1. ತಮ್ಮ ಮನವಿ ಪತ್ರ ದಿನಾಂಕ: 14.03.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.03.2023

** * **

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ. ವೀರಯ್ಯ ಹಿರೇಮಠರವರು ದಿನಾಂಕ:11.06.2023ರಂದು ಭಾನುವಾರ ಬೆಳಿಗ್ಗೆ 5.30 ರಿಂದ 8.30 ರವರೆಗೆ ಸುಮಾರು 1,000 (ಒಂದು ಸಾವಿರ) ಮಂದಿ ಪಾಲ್ಗೊಂಡು 10 ಕಿ.ಮೀ. ಓಟದ ಸ್ಪರ್ಧೆ (ಮ್ಯಾರಥಾನ್) ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಲಾಗಿರುವುದರಿಂದ ಸದರಿ ಕಾರ್ಯಕ್ರಮಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದ ಮುಂಖಾತರ ಪ್ರವೇಶಿಸಿ (ಗಾಂಧಿ ಭವನ, ಆಡಳಿತ ಕಛೇರಿ, ಗ್ರಂಥಾಲಯ, ಮೈಸೂರು ರಸ್ತೆಯ ಮುಖ್ಯ ದ್ವಾರದ) ಮೂಲಕ ಹೊರ ಹೋಗಲು **ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ.**

1. ವಿಶ್ವವಿದ್ಯಾಲಯದ ಆವರಣದಲ್ಲಿ ಜೈವಿಕ ವನಗಳಿದ್ದು ಸಸ್ಯಗಳಿಗೆ ಯಾವುದೇ ಹಾನಿಯುಂಟಾಗದಂತೆ ಎಚ್ಚರವಹಿಸುವುದು.
2. ಆವರಣದಲ್ಲಿ ಪ್ಲಾಸ್ಟಿಕ್ ಪದಾರ್ಥಗಳ ಬಳಕೆಯನ್ನು ನಿಷೇಧಿಸಿದೆ.
3. ವಿಶ್ವವಿದ್ಯಾಲಯದ ಚರಾಸ್ತಿ ಮತ್ತು ಸ್ಥಿರಾಸ್ತಿಗಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಚ್ಚರಿಕೆ ವಹಿಸತಕ್ಕದ್ದು. ತಾವು ಊಟ ಉಪಹಾರಗಳಿಗೆ ಹಾಗೂ ಇನ್ನಿತರೆ ಸೌಲಭ್ಯಗಳಿಗಾಗಿ ಬಳಸಿದ ತ್ಯಾಜ್ಯವನ್ನು ವಿಶ್ವವಿದ್ಯಾಲಯದ ಆವರಣದಿಂದ ಹೊರಗೆ ಕೊಂಡೊಯ್ದು, ಸ್ವಚ್ಛತೆಗೆ ಆದ್ಯತೆ ನೀಡತಕ್ಕದ್ದು.
4. ವಿಶ್ವವಿದ್ಯಾಲಯದಲ್ಲಿರುವ ಆಸ್ತಿ ಪಾಸ್ತಿಗೆ ಯಾವುದೇ ನಷ್ಟ ಆದಲ್ಲಿ ತಗಲುವ ನಿರ್ದಿಷ್ಟ ನಷ್ಟದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ತುಂಬಿಕೊಡತಕ್ಕದ್ದು.
5. ಅನುಮತಿದಾರರಿಗಾಗಲೀ ಅಥವಾ ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುವವರಿಗೆ ಸ್ಥಳದಲ್ಲಿ ಸಂಭವಿಸಬಹುದಾದ ಸ್ವಾಭಾವಿಕ, ನೈಸರ್ಗಿಕ ಅನಾನುಕೂಲತೆಗಳು ಅಪಘಾತಗಳು ಮತ್ತು ಇವುಗಳಿಂದ ಆಗುವ ಕಷ್ಟ-ನಷ್ಟಗಳಿಗೆ ವಿಶ್ವವಿದ್ಯಾಲಯವು ಹೊಣೆಯಾಗುವುದಿಲ್ಲ.

24/3/23

ಕುಲಸಚಿವರು

**ಪ್ರತಿಗಳು:**

1. ಪೊಲೀಸ್ ಠಾಣಾಧಿಕಾರಿಗಳು, ಜ್ಞಾನಭಾರತಿ ಆರಕ್ಷಕ ಠಾಣೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
2. ವಿಶ್ವವಿದ್ಯಾಲಯದ ಭದ್ರತಾ ಸಿಬ್ಬಂದಿಗಳ ಗಮನಕ್ಕೆ
3. ಕಛೇರಿ ಪ್ರತಿ.

# ಸಾರ್ವತ್ರಿಕ ವಿಧಾನಸಭಾ ಚುನಾವಣೆ-2023

ಚುನಾವಣಾಧಿಕಾರಿ ರವರ ಕಛೇರಿ, 166-ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾಬಡಾವಣೆ, ಬೆಂಗಳೂರು-560072. ದೂರವಾಣಿ ಸಂಖ್ಯೆ: 080 23181330.

---

ಸಂಖ್ಯೆ:.ಚು.ಅ/ಗೋ.ರಾ.ನ/ಚು/ಪಿಆರ್/27/2023-24 ದಿನಾಂಕ: 06-04-2023

## ಹಿಂಬರಹ

**ವಿಷಯ:**- ದಿನಾಂಕ. 11-06-2023 ರಂದು 10 ಕಿಲೋ ಮೀಟರ್ ಓಟದ ಸ್ಪರ್ಧೆಯನ್ನು ನಡೆಸಲು ಅನುಮತಿ ಕೋರಿರುವ ಬಗ್ಗೆ

**ಉಲ್ಲೇಖ:**- 1. ಭಾರತ ಚುನಾವಣಾ ಆಯೋಗ ರವರ ಪತ್ರದ ಸಂಖ್ಯೆ: ಇ.ಸಿ.ಐ/ಪಿ.ಎನ್/24/2023, ದಿನಾಂಕ:29/03/2023.

2. ಅರ್ಜಿದಾರರ ಮನವಿಯ ದಿನಾಂಕ: 06-04-2023

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ವೀರಯ್ಯ ಹಿರೇಮಠ, ಸಮಾಜ ಸೇವಕರು, ವಾರ್ಡ್ ನಂ.155, ನಾಯಂಡಹಳ್ಳಿ ರವರು ದಿನಾಂಕ. 11-06-2023 ರಂದು ಬೆಳಿಗ್ಗೆ 5-30 ಗಂಟೆಯಿಂದ ಬೆಳಿಗ್ಗೆ 8-30 ಗಂಟೆವರೆಗೆ ಸುಮಾರು 5000 ಜನರೊಂದಿಗೆ ನಾಯಂಡಹಳ್ಳಿ ಇಂದಿರಾ ಕ್ಯಾಂಟಿನ್‌ನಿಂದ ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಭಾರತಿ ಹಾಗೂ ನಾಯಂಡಹಳ್ಳಿ ಮೆಟ್ರೋ ನಿಲ್ದಾಣ ಮುಖಾಂತರ ಇಂದಿರಾ ಕ್ಯಾಂಟಿನ್ ಬಳಿ 10 ಕಿಲೋ ಮೀಟರ್ ಓಟದ ಸ್ಪರ್ಧೆ ಮತ್ತು ಇನ್ನು ಮುಂತಾದ ಓಟದ ಸ್ಪರ್ಧೆಯನ್ನು ನಡೆಸಲು ನಿರಾಪೇಕ್ಷಣಾ ಪತ್ರ ನೀಡಲು ಕೋರಿರುತ್ತೀರಿ.

ಸದರಿ ಮನವಿಯನ್ನು ಪರಿಶೀಲಿಸಲಾಗಿ ಉಲ್ಲೇಖ (1) ರಂತೆ ಕರ್ನಾಟಕ ಸಾರ್ವತ್ರಿಕ ಚುನಾವಣೆ-2023ರ ಅನ್ವಯ ಮಾದರಿ ನೀತಿ ಸಂಹಿತೆಯು ದಿನಾಂಕ. 13-05-2023 ರವರೆಗೆ ಜಾರಿಯಲ್ಲಿದ್ದು, ಇದು ಚುನಾವಣೇಯೇತರ ಅನುಮತಿಯಾಗಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಹಾಗೂ ಪೋಲಿಸ್ ಠಾಣೆಯಿಂದ ಅನುಮತಿ ಪಡೆಯತಕ್ಕದ್ದು ಎಂದು ಈ ಮೂಲಕ ತಿಳಿಯಪಡಿಸಿದೆ.

ಚುನಾವಣಾಧಿಕಾರಿ
166-ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ
ಪಾಲಿಕೆ ಸೌಧ, 14ನೇ ಅಡ್ಡರಸ್ತೆ,
ಚಂದ್ರಾಬಡಾವಣೆ 1ನೇ ಹಂತ, ಬೆಂಗಳೂರು-560 072.

ರವರಿಗೆ,
ಶ್ರೀ ವೀರಯ್ಯ ಹಿರೇಮಠ,
ಸಮಾಜ ಸೇವಕರು,
ನಂ.26, ವಿನಾಯಕ ಬಡಾವಣೆ, ಸಾಯಿ ರಸ್ತೆ ಕಾಂಪೌಂಡ್,
ನಾಯಂಡಹಳ್ಳಿ, ಬೆಂಗಳೂರು – 5600039

**ಪ್ರತಿಯನ್ನು:-**

1. ಸಹಾಯಕ ಪೋಲೀಸ್ ಆಯುಕ್ತರು (ಸ್ಥಳೀಯ ಪೋಲೀಸ್ ಠಾಣೆ) ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
2. ಪೋಲೀಸ್ ಇನ್ಸ್‌ಪೆಕ್ಟರ್, ವಿಜಯನಗರ/ಕಾಮಾಕ್ಷಿಪಾಳ್ಯ/ಬಸವೇಶ್ವರನಗರ/ಚಂದ್ರಾಲೇಔಟ್/ಬ್ಯಾಟರಾಯನಪುರ/ಮಾಗಡಿ ರಸ್ತೆ ಪೋಲೀಸ್ ಠಾಣೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.